# ವಾರ್ಡ್ ಸಭೆ ಸಂಖ್ಯೆ.31

ದಿನಾಂಕ:.04.04.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಅಧ್ಯಕ್ಷರು)
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀಮತಿ ಪ್ರೇಮ ಸದಸ್ಯರು.
5. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
6. ಶ್ರೀ ರಾಜೇಶ್ ಸದಸ್ಯರು.
7. ಶ್ರೀ ಬಿ.ಆರ್ ಪುಟ್ಟ ಸ್ವಾಮಿ ಸದಸ್ಯರು.
8. ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈಧ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
9. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ಛಾಯಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಜಿ.ಕೆ ವೆಂಕಟೇಶಯ್ಯ, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ), ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ಹನುಮಂತರಾಜು ಪಿ.ಎಸ್.ಐ ಯಶವಂತಪುರ ಸಂಚಾರಿ ಠಾಣೆ.
15. ಶ್ರೀ ರಂಜಿತ್ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | - |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | - |
| 3. | ಸಾರ್ವಜನಿಕರು ಕೆ.ಎಚ್.ಬಿ ಕಾಲೋನಿಯಲ್ಲಿ ನೀರಿನ ಸಮಸ್ಯ ಪರಿಹರಿಸಲಾಗಿದೆ ಆದರೆ ನೀರಿನ ಕೊಳವೆ ಮಾರ್ಗಕ್ಕೆ ಅಗೆದಿರುವ ರಸ್ತೆಯನ್ನು ದುರಸ್ಥಿ ಮಾಡಿಸಿಕೊಡಬೇಕೆಂದು ಕೋರಿದರು. ಇದಕ್ಕೆ ವಾರ್ಡ್ ಅಭಿಯಂತರರು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | - |
| 4. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು ಕೋವಿಡ್ ಮತ್ತು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಡಾ॥ ಶ್ರೀ ಶಶಿಕುಮಾರ್ ರವರು ಸಭೆಗೆ ಮಾಹಿತಿ ನೀಡಿದರು. | - |
| 5. | ಸಾರ್ವಜನಿಕರು ಶಂಕರನಗರ ಮುಖ್ಯರಸ್ತೆಯಲ್ಲಿ ಸಿಂಡಿಕೇಟ್ ಬ್ಯಾಂಕ್ ಎಟಿಎಂ ಮುಂಭಾಗ ನೀರು ಪೋಲು ಆಗುತ್ತಿರುವ ಬಗ್ಗೆ ದೂರು ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಭಂದಪಟ್ಟ ಅಧಿಕಾರಿಗಳಿಗೆ ಸಮಸ್ಯೆ ಪರಿಹರಿಸಲು ಸೂಚಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 6. | ಕಾರ್ಯದರ್ಶಿಗಳು ವಿಜಯಾನಂದನಗರದಲ್ಲಿ ಸ್ಯಾನಿಟರಿ ಮಾರ್ಗ ನಿರ್ಮಿಸಲು ಮೇಲಾಧಿಕಾರಿಗಳಿಗೆ ಅಂದಾಜು ಪಟ್ಟಿ ಮತ್ತು ಯೋಜನೆ ಸಲ್ಲಿಸಲಾಗಿದೆ ಎಂದು ತಿಳಿಸಲಾಗಿತ್ತು ಆದ್ದರಿಂದ ಕಡತ ಯಾವ ಸ್ಥಿತಿಯಲ್ಲಿ ಎಂಬ ಮಾಹಿತಿ ನೀಡಿ ಎಂದು ತಿಳಿಸಿದರು. ಇದಕ್ಕೆ ಶ್ರೀ ಸೋಮನಾಥ್ ರವರು ಮಳೆಗಾಲ ಪ್ರಾರಂಭಕ್ಕಿಂತಲು ಮುಂಚಿತವಾಗಿ ಕಾಮಗಾರಿ ಮುಗಿಯುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 7. | ಕಾರ್ಯದರ್ಶಿಗಳು ವಾರ್ಡ್ ವ್ಯಾಪ್ತಿಯಲ್ಲಿ ದುಸ್ಥಿತಿ/ ಹಳೆಯ ವಾಹನಗಳು ಇದಲ್ಲಿ ಮಾಹಿತಿ ನೀಡಲು ಕೋರಿದರು. | - |
| 8. | ಕಾರ್ಯದರ್ಶಿಗಳು ಯಶವಂತಪುರ ಸಂಚಾರಿ ಇಲಾಖೆ ರವರಿಗೆ ಉಲ್ಲಾಸ್ ಚಿತ್ರಮಂದಿರ ರಸ್ತೆಯಲ್ಲಿನ ಪಾದಚಾರಿ ಮಾರ್ಗಗಳಲ್ಲಿ ಯಾವುದೇ ವಾಹನಗಳು ನಿಲ್ಲಿಸಲು ಅವಕಾಶ ಕಲ್ಪಿಸಬಾರದು ಎಂದು ತಿಳಿಸಿದರು. ಇದಕ್ಕೆ ಯಶವಂತಪುರ ಸಂಚಾರಿ ಇಲಾಖೆ ರವರು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. | ಯಶವಂತಪುರ ಸಂಚಾರಿ ಇಲಾಖೆ |

Scanned with CamScanner

| | | |
|---|---|---|
| 9. | ಕಾರ್ಯದರ್ಶಿಗಳು ಬೆಲ್ ಅಪಾರ್ಟ್‌ಮೆಂಟ್ ಇಂದ ಆರ್.ಜಿ ರಾಯಲ್ ಹೋಟೆಲ್ ವರೆಗೆ ಲಭ್ಯವಿರುವ ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸಲಾಗಿದೆ ಹಾಗೂ ಇನ್ನೂ 5 ಕಂಬಗಳ ಅಗತ್ಯವಿರುತ್ತವೆ ಎಂದು ತಿಳಿಸಿದರು. | ಸ್ಟ್ರೀಟ್ ಲೈಟ್ |
| 10. | ಕಾರ್ಯದರ್ಶಿಗಳು ಟಯೋಟ ಶೋರೂಂ ರವರು ರಸ್ತೆಯಲ್ಲಿ ವಹಾನಗಳನ್ನು ಪಾರ್ಕಿಂಗ್ ಮಾಡುತ್ತಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಶ್ರೀ ಹನುಮಂತರಾಜು ಪಿ.ಎಸ್.ಐ. ಯಶವಂತಪುರ ಸಂಚಾರಿ ಪೋಲೀಸ್ ಠಾಣೆ ರವರು ಕಡತಗಳನ್ನು ಪರಿಶೀಲಿಸಿ ಮುಂದಿನ ಸಭೆಯಲ್ಲಿ ಮಾಹಿತಿ ನೀಡುತ್ತೇನೆ ಎಂದು ತಿಳಿಸಿದರು. | ಯಶವಂತಪುರ ಸಂಚಾರಿ ಇಲಾಖೆ |
| 11. | 5ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಶಂಕರನಗರ ಹತ್ತಿರ ರಸ್ತೆ ಅಗೆಯಲು ಅನುಮತಿ ಕೋರಿದರು ಇದಕ್ಕೆ ವಾರ್ಡ್ ಅಭಿಯಂತರರು ಸಭೆ ಮುಗಿದ ನಂತರ ಸ್ಥಳ ಪರಿಶೀಲಿಸೋಣ ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 12. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಲಾರಿ ಸ್ಟಾಂಡ್ ವೃತ್ತದ ಹತ್ತಿರ ಸ್ಯಾನಿಟರಿ ಸಮಸ್ಯ ಪರಿಹರಿಸಲು ಕೋರಿದರು. ಇದಕ್ಕೆ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕಾಮಗಾರಿ ನಿರ್ವಹಿಸಲು ಅನುಮತಿ ದೊರೆಯುತ್ತಿಲ್ಲ ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 13. | ಕಾರ್ಯದರ್ಶಿಗಳು ಟಯೋಟ ಶೋರೂಂ ರವರು ರಸ್ತೆಯಲ್ಲಿ ವಹಾನಗಳನ್ನು ಪಾರ್ಕಿಂಗ್ ಮಾಡುತ್ತಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಶ್ರೀ ಹನುಮಂತರಾಜು ಪಿ.ಎಸ್.ಐ. ಯಶವಂತಪುರ ಸಂಚಾರಿ ಪೋಲೀಸ್ ಠಾಣೆ ರವರು ಕಡತಗಳನ್ನು ಪರಿಶೀಲಿಸಿ ಮುಂದಿನ ಸಭೆಯಲ್ಲಿ ಮಾಹಿತಿ ನೀಡುತ್ತೇನೆ ಎಂದು ತಿಳಿಸಿದರು. | ಸಂಚಾರಿ ಇಲಾಖೆ |
| 14. | ಶ್ರೀ ರಾಜೇಶ್ ಸದಸ್ಯರು ರವರು ಮಾರ್ಕೆಟ್ ಹತ್ತಿರಿ ಲಾರಿಗಳಲ್ಲಿ ಕಸವನ್ನು ಎಸೆಯುತ್ತಿರುತ್ತಾರೆ ಇದರಿ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಕಸವನ್ನು ತೆರವುಗೊಳಿಸುವಂತೆ ಸಂಬಂದಪಟ್ಟವರಿಗೆ ಸೂಚಿಸಿಸಲಾಗುವುದು ಎಂದು ತಿಳಿಸಿದರು. | ಘನತ್ಯಾಜ್ಯ ಇಲಾಖೆ |
| 15. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | – |

ಅಧ್ಯಕ್ಷರು

L. Venugopal

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner